## <u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

## **ಸಿ.ಸಿ ಸಂಖ್ಯೆ 3643–2022**

**ಸಾಕ್ಷಿಯನ್ನು ದಿಃ 23.10.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | |
|---|---|---|
| ಹೆಸರು | ವಿ ವೆಂಕಟಪತಿ | ಡಿಡಬ್ಲ್ಯೂ 1 |
| ತಂದೆಯ ಹೆಸರು | ಲೇಟ್ ವಿ ವೆಂಕಟಯ್ಯ | |
| ವಯಸ್ಸು | 59 ವರ್ಷ | |
| ಉದ್ಯೋಗ | ಕೂಲಿ | |
| ವಾಸಸ್ಥಳ | ವಿನೋಭಾ ಕಾಲೋನಿ, ಸಿಬಿಟಿ<br>ಕಾಲೋನಿ ಪೋಸ್ಟ್, ಹುಣಸೂರು<br>ತಾಃ | |

**<u>ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಕೆಎನ್‌ಎಸ್ ವಕೀಲರಿಂದಃ</u>**

ಈ ಕೇಸಿನ ಫಿರ್ಯಾದುದಾರರಾದ ಸೀನಶೆಟ್ಟಿರವರ ಪರಿಚಯ ನನಗೆ ಇಲ್ಲ. ಈ ಕೇಸಿನಲ್ಲಿ ನನಗೆ ಲಾಯರ್ ನೋಟೀಸ್ ಬಂದಿಲ್ಲ. ನನಗೆ ಮತ್ತು ಪೊಲೀಸ್ ಆದ ಸ್ವಾಮಿಶೆಟ್ಟಿ ಎಂಬುವವರಿಗೆ ಹಣದ ವ್ಯವಹಾರ ಇತ್ತು. ಸ್ವಾಮಿಶೆಟ್ಟಿ ಎನ್ನುವವರಿಗೆ ನಾನು ಈಗ್ಗೆ 8 ವರ್ಷಗಳ ಹಿಂದೆ ಒಂದು ಚೆಕ್ ಕೊಟ್ಟಿದ್ದೆ. ಸ್ವಾಮಿಶೆಟ್ಟಿರವರಿಂದ ನಾನು ಪಡೆದಂತಹ ಸಾಲವನ್ನು ನಾನು ಅವರಿಗೆ ವಾಪಸ್ ನೀಡಿದ್ದೆ. ಆಗ ಚೆಕ್ಕು ಕೇಳಿದ್ದಕ್ಕೆ ಈ ಹೊತ್ತು ನಾಳೆ ಕೊಡುತ್ತೇನೆ ಎಂದು ಹೇಳುತ್ತಿದ್ದರು, ಆದರೆ ಚೆಕ್ಕನ್ನು ಅವರು ನನಗೆ ವಾಪಸ್ ಕೊಟ್ಟಿರಲಿಲ್ಲ. ಅಷ್ಟರಲ್ಲಿ ಚೆಕ್ ಕೇಳಿದ್ದಕ್ಕೆ ನನ್ನ ಮತ್ತು ಅವರ ನಡುವೆ ಮಾತುಕತೆ ನಿಂತು ಹೋಯಿತು. ನಂತರ ನನಗೆ ಕೋರ್ಟ್‌ಗೆ ಬಂದಾಗ ಸದರಿ ಸ್ವಾಮಿಶೆಟ್ಟಿ ಮತ್ತು ಫಿರ್ಯಾದುದಾರರಾದ ಶೀನಶೆಟ್ಟಿರವರು ಸಂಬಂಧಿಕರು ಎಂದು ನನಗೆ ಗೊತ್ತಾಯಿತು. ನನ್ನದೇನೂ ತಪ್ಪಿರುವುದಿಲ್ಲ ಆದ್ದರಿಂದ ಕೇಸಿನಿಂದ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**<u>ಪಾಟೀಸವಾಲುಃ- ಫಿರ್ಯಾದಿದಾರರ ಪರ ಶ್ರೀ ಎಂಇಪಿ ವಕೀಲರಿಂದಃ</u>**

ನಾನು ನಮ್ಮ ಗ್ರಾಮದಲ್ಲಿ ಪ್ರಥಮ ದರ್ಜೆ ಗುತ್ತಿಗೆದಾರನಾಗಿರುತ್ತೇನೆ ಎಂದರೆ ಸರಿಯಲ್ಲ. ಮೇಸ್ತ್ರೀ ಕೆಲಸ ಮಾಡಿಕೊಂಡಿದ್ದೇನೆ. ನನ್ನ ವಾಸ ಹುಣಸೂರು ತಾಲ್ಲೂಕಿನ ವಿನೋಭಾ ಕಾಲೋನಿ ಎಂದರೆ ಸರಿ. ನಾನು ಅಲ್ಲಿ ಹುಟ್ಟಿ ಬೆಳೆದು ಅಲ್ಲಿಯೇ ವಾಸ ಮಾಡಿಕೊಂಡಿದ್ದೇನೆ. ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದು ಕನ್ನಡ ಓದಲು ಬರೆಯಲು ಬರುತ್ತದೆ. ವೆಂಕಟಪತಿ ಲೇಟ್ ವೆಂಕಟಯ್ಯ ವಿನೋಭಾ ಕಾಲೋನಿ ಹುಣಸೂರು ತಾಃ ಮೈಸೂರು ಜಿಲ್ಲೆ ಎಂದರೆ ನನ್ನಗೆ ಅಡ್ರೇಸ್ ಇರುತ್ತದೆ. ಆದರೆ ರತ್ನಪುರಿ ರೋಡ್ ಬರುವುದಿಲ್ಲ. ಸಿಬಿಟಿ ಕಾಲೋನಿ ಪೋಸ್ಟ್ ಬರುತ್ತದೆ. ವಿನೋಭಾ ಕಾಲೋನಿ ರತ್ನಾಪುರಿ ಹೋಗುವ ರಸ್ತೆಯಲ್ಲಿ ಇದೆ ಎಂದರೆ ಸರಿ. ಸಿಬಿಟಿ ಕಾಲೋನಿಯಲ್ಲಿ ಪೋಸ್ಟ್ ಕಛೇರಿ ಇರುತ್ತದೆ. ನಿಪಿ-5 ರಲ್ಲಿ ನಿಪಿ-5 ಅಂಚೆ ಲಕೋಟೆಯಲ್ಲಿ ನನ್ನ ಹೆಸರು ವೆಂಕಟಪತಿ ಬಿನ್ ಲೇಟ್ ಪಿ ವೆಂಕಟಯ್ಯ ಎಂದು ನಮೂದು ಆಗಿದೆ ಎಂದರೆ ನನ್ನ ತಂದೆ ಹೆಸರು ವಿ ವೆಂಕಟಯ್ಯ ಎಂದು ಇರುತ್ತದೆ ಎಂದು ನುಡಿಯುತ್ತಾರೆ. ನಾನು ವಾಸ ಇರುವ ವಿಳಾಸ ಸದರಿ ನಿಪಿ-5 ಲಕೋಟೆ ಮೇಲೆ ನಮೂದು ಇದೆ ಎಂದರೆ ಸರಿ. ನಾನು ಸದರಿ ವಿಳಾಸದಲ್ಲಿ ವಾಸವಿದ್ದರೂ ಅಂಚೆ ಲಕೋಟೆ ನನ್ನ ವಿಳಾಸಕ್ಕೆ ಬಂದಿದ್ದರೂ ಪೋಸ್ಟ್ ಮೇನ್ ನೊಂದಿಗೆ ಶಾಮೀಲಾಗಿ ಸುಳ್ಳು ಷರಾ ಬರೆಸಿ ವಾಪಸ್ ಕಳುಹಿಸಿದ್ದೇನೆ ಎಂದರೆ ಸರಿಯಲ್ಲ. ಅದಲ್ಲದೆ ನನ್ನ ವಿಳಾಸಕ್ಕೆ ಆರ್ಡಿನರಿ ಪೋಸ್ಟ್ ಸಹ ಬಂದು ತಲುಪಿದೆ ಎಂದರೆ ಸರಿಯಲ್ಲ ಹಾಗೇ ಬಂದಂತಹ ಆರ್ಡಿನರ್ ಪೋಸ್ಟ್‌ನ್ನು ನೋಡಿ ಉದ್ದೇಶ ಪೂರಕವಾಗಿ ನಿಪಿ-5 ಲಕೋಟೆಯನ್ನು ವಾಪಸ್ ಕಳುಹಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸಾಮಾನ್ಯವಾಗಿ ಕೆಲಸ ಕಾರ್ಯಕ್ಕೆ ಬಳಗೆ ಹೋಗಿ ಸಂಜೆ ಮನೆಗೆ ಬರುತ್ತೇನೆ ಎಂದರೆ ಸರಿ. ತಿಂಗಳುಗಟ್ಟಲೆ ನಾನು ಸದರಿ ಮೇಲೆ ಹೇಳಿದ ವಿಳಾಸವನ್ನು ಬಿಟ್ಟು ಎಲ್ಲಿಯೂ ಹೋಗುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ಕೂಲಿಗಾಗಿ ಬೇರೆ ಕಡೆಗೆ ಹೋಗುತ್ತಿದ್ದೇನೆ ಎಂದು ಹೇಳುತ್ತಾರೆ. ಸಿವಿಲ್ ಕಾಂಟ್ರಾಕ್ಟರ್ ಅಡಿಯಲ್ಲಿ ಅವರು ಹೇಳಿದ ಕಡೆಗೆ ನಾನು ಕೆಲಸಕ್ಕೆ ಹೋಗುತ್ತಿರುತ್ತೇನೆ. ನಾನು ಹಾಗೇ ಹೋಗುತ್ತಿದ್ದ ಕಾಂಟ್ರಾಕ್ಟರ್ ಹೆಸರು ಹುಣಸೂರಿನ ಬಿ ನಾಗರಾಜು ಎಂದು ಇರುತ್ತದೆ. ಅವರು ಕ್ಲಾಸ್ -1 ಕಾಂಟ್ರಾಕ್ಟರ್ ಇರುತ್ತಾರೆ. ಅವರ ಪೂರ್ಣ ವಿಳಾಸ ಮತ್ತು ಫೋನ್ ನಂಬರ್ ನನಗೆ ಗೊತ್ತಿಲ್ಲ. ಬಿಳಿಕೆರೆಯಲ್ಲಿ

ಕೆಲಸಕ್ಕೆಂದು ಕರೆದುಕೊಂಡು ಹೋಗುತ್ತಿದ್ದರು. ಈಗ್ಗೆ 1 ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ನಾನು ಮತ್ತು 10 ಜನ ಕೂಲಿಕಾರರು ಕೆಲಸ ಮಾಡುತ್ತಿದ್ದೇವೆ ಕೂಲಿಕಾರರ ಹೆಸರು ನನಗೆ ಗೊತ್ತಿಲ್ಲ. ನಾನು ಸಿವಿಲ್ ಕಾಂಟ್ರ್ಯಾಕ್ಟರ್ ನಾಗರಾಜು ರವರ ಬಳಿ ಕೂಲಿ ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಾನು ಸಿವಿಲ್ ಕಾಂಟ್ರ್ಯಾಕ್ಟರ್ ಎಂದರೆ ಸರಿಯಲ್ಲ. ನಾನು ಪ್ರಥಮ ದರ್ಜೆ ಕಾಂಟ್ರ್ಯಾಕ್ಟರ್ ಆಗಿ ಕೆಲಸ ಮಾಡುತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ–1 ಚೆಕ್ಕಿನಲ್ಲಿರುವ ನಿಪಿ–1(ಎ) ಸಹಿ ನನ್ನದೇ ಇರುತ್ತದೆ. ಸದರಿ ಚೆಕ್ಕು ನನ್ನ ಖಾತೆಗೆ ಸಂಬಂಧಿಸಿದ್ದು ಎಂದರೆ ಸರಿ. ಸದರಿ ಬ್ಯಾಂಕ್ 20–22 ವರ್ಷದ ಹಿಂದೆಯೇ ಕ್ಲೋಸ್ ಆಗಿರುತ್ತದೆ. ಹಾಗೇ ಖಾತೆ ಕ್ಲೋಸ್ ಆಗಿದೆ ಎಂದು ತೋರಿಸಲು ದಾಖಲೆ ತಂದು ಹಾಜರು ಪಡಿಸುತ್ತೇನೆ. ನಿಪಿ–1 ಚೆಕ್ಕನ್ನು ಸಾಲ ತಿರುವಳಿಗಾಗಿ ಫಿರ್ಯಾದುದಾರರಿಗೆ ನಾನು ಕೊಟ್ಟಿದ್ದೆ ಎಂದರೆ ಸರಿಯಲ್ಲ. ಅವರಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ ಚಕ್ಕು ಕೊಟ್ಟು ಮೋಸ ಮಾಡಿದ್ದೇನೆ ಎಂದರೆ ಸರಿಯಲ್ಲ. ಇದೇ ಮೊದಲ ಬಾರಿಗೆ ನಾನು ನನ್ನ ತಂದೆಯೇ ಹೆಸರು ಪಿ ವೆಂಕಟಯ್ಯ  ಅಲ್ಲ ವಿ ವೆಂಕಟಯ್ಯ ಎಂದು ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆ ಸಹ ಇದೆ. ನಾನು ಮತ್ತು ಫಿರ್ಯಾದುದಾರರು ಹಲವಾರು ವರ್ಷಗಳಿಂದ ಪರಿಚಯಸ್ಥರು ಎಂದರೆ ಸರಿಯಲ್ಲ. ನಾನು ಉಪಯೋಗಿಸುತ್ತಿರುವ ಮೊಬೈಲ್ ಸಂ.9686663938 ಆಗಿರುತ್ತದೆ. ಫಿರಾದುದಾರರ ಮೋಬೈಲ್ ಸಂಖ್ಯೆ ನನಗೆ ಗೊತ್ತಿಲ್ಲ. ಅವರ ಮೊಬೈಲ್ ನಂ 9731345001 ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮೊಬೈಲ್ ನಂಬರಿನಿಂದ ಫಿರ್ಯಾದುದಾರರ ಮೊಬೈಲ್ ನಂಬರಿಗೆ ಕೇಸು ದಾಖಲಿಸುವ ಪೂರ್ವದಲ್ಲಿ ಹಲವಾರು ಬಾರಿ ಮಾತನಾಡಿದ್ದೇನೆ ಎಂದರೆ ಸರಿಯಲ್ಲ.

ಸ್ವಾಮಿಶೆಟ್ಟಿ ಎಂಬುವವರು ಮೈಸೂರಿನಲ್ಲಿರುತ್ತಾರೆ.  ಸ್ವಾಮಿಶೆಟ್ಟಿರವರು ಮೆಟಗಳ್ಳಿ ಪೋಲಿಸ್ ಠಾಣೆಯಲ್ಲಿ ಇದ್ದಾಗಿನಿಂದಲೂ ನನಗೆ ಪರಿಚಯ ಇರುತ್ತಾರೆ. ನಾನು ಅವರು ಚೆನ್ನಾಗಿದ್ದೇವೆ ಎಂದರೆ ಸರಿಯಲ್ಲ. ಚೆಕ್ ಕೇಳಿದ್ದಕ್ಕೆ ಮಾತುಕತೆ ನಿಲ್ಲಿಸಿದ್ದಾರೆ ಎಂದು ಹೇಳುತ್ತಾರೆ. ಚೆಕ್ ಕೇಳಿದರೂ ವಾಪಸ್ ನೀಡಿಲ್ಲ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿಲ್ಲ. ಆ ರೀತಿ ದೂರು ಕೊಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಹಣ ವಾಪಸ್ ಕೊಟ್ಟಿದ್ದರೂ ಚೆಕ್ ವಾಪಸ್ ಕೊಟ್ಟಿಲ್ಲ ಎಂದು ಈ ಪ್ರಕರಣವನ್ನು

ದಾಖಲಿಸುವ ಪೂರ್ವದಲ್ಲಿ ನೋಟೀಸನ್ನಾಗಲಿ ಕೇಸನ್ನಾಗಲಿ ದಾಖಲಿಸಲು ತೊಂದರೆ ಇರಲಿಲ್ಲ. ಈ ಕೇಸನ್ನು ದಾಖಲಿಸಿದ ನಂತರ ಪೊಲೀಸರು ಸಮನ್ಸ್ ತಂದು ಕೊಟ್ಟ ನಂತರ ಕೇಸಿನ ಬಗ್ಗೆ ಗೊತ್ತಾಯಿತು. ಹಾಗೇ ಗೊತ್ತಾದ ನಂತರ ಸದರಿ ಸ್ವಾಮಿಶೆಟ್ಟಿರವರ ಮೇಲೆ ಯಾವುದೇ ದೂರನ್ನು ದಾಖಲಿಸಿಲ್ಲ, ಮತ್ತು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಆ ರೀತಿ ಕ್ರಮ ತೆಗೆದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ, ಆದರೆ ಕೇಸು ನ್ಯಾಯಾಲಯದಲ್ಲಿ ಇದ್ದ ಕಾರಣ ತೆಗೆದುಕೊಂಡಿಲ್ಲ. ಸ್ವಾಮಿಶೆಟ್ಟಿರವರನ್ನು ನ್ಯಾಯಾಲಯಕ್ಕೆ ಕರೆಯಿಸಿ ಸಾಕ್ಷಿ ಹೇಳಿಸಲು ತೊಂದರೆ ಇದೆಯಾ ಎಂದರೆ ಅವರಿಗೂ ನನಗೂ ಮಾತುಕತೆ ಇಲ್ಲ ಎಂದು ಹೇಳುತ್ತಾರೆ. ನನ್ನ ಮತ್ತು ಸ್ವಾಮಿಶೆಟ್ಟಿ ರವರ ನಡುವೆ ಹಣಕಾಸಿನ ವ್ಯವಹಾರ ಆಯಿತು ಎಂದು ಹೇಳಿದ್ದು ಅದನ್ನು ನೋಡಿದವರು ಯಾರೂ ಇಲ್ಲ. ಅದೇ ರೀತಿ ಸದರಿ ಸ್ವಾಮಿಶೆಟ್ಟಿರವರು ಚೆಕ್ಕು ಕೊಟ್ಟಿದ್ದನ್ನು ನೋಡಿದವರು ಯಾರೂ ಇಲ್ಲ. ನನ್ನ ಮತ್ತು ಸ್ವಾಮಿಶೆಟ್ಟಿರವರ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಚೆಕ್ಕನ್ನು ನಾನು ಸದರಿ ಸ್ವಾಮಿಶೆಟ್ಟಿರವರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಈ ಕೇಸಿನ ಫಿರ್ಯಾದುದಾರರಾದ ಶೀನಶೆಟ್ಟಿರವರಿಂದ 3.00 ಲಕ್ಷ ರೂ ಸಾಲ ಪಡೆದು ಅದರ ತಿರುವಳಿಗಾಗಿ ಅವರಿಗೆ ನಿಪಿ–1 ಚೆಕ್ಕು ಕೊಟ್ಟಿದ್ದೆ ಎಂದರೆ ಸರಿಯಲ್ಲ. ನನ್ನ ಮತ್ತು ಫಿರಾದುದಾರರ ನಡುವೆ ಆದ ವ್ಯವಹಾರ ಮುಚ್ಚಿ ಹಾಕಲು ಸ್ವಾಮಿಶೆಟ್ಟಿರವರಿಗೆ ಚೆಕ್ಕು ಕೊಟ್ಟಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ಸಮನ್ಸ್ ನೀಡಿರುವ ವಿಳಾಸದಲ್ಲಿ ವೆಂಕಟಪತಿ ಬಿನ್ ಲೇಟ್ ಪಿ ವೆಂಕಟಯ್ಯ, ವಿನೋಭಾ ಕಾಲೋನಿ ರತ್ನಾಪುರಿ ರೋಡ್, ಹುಣಸೂರು ತಾಃ ಮೈಸೂರು ಜಿಲ್ಲೆ ಕರ್ನಾಟಕ ಎಂಬ ವಿಳಾಸ ಇತ್ತು ಎಂದರೆ ಸರಿ. ಸದರಿ ವಿಳಾಸಕ್ಕೆ ಪೋಲಿಸರು ನನಗೆ ಸಮನ್ಸ್ ಜಾರಿ ಮಾಡಿದ್ದರು ಎಂದರೆ ಸರಿ. ಸದರಿ ಸಮನ್ಸ್ ಪ್ರತಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ–14 ಎಂದು ಗುರುತಿಸಲಾಯಿತು.

ಫಿರ್ಯಾದುದಾರರಿಗೆ ನಾನು ನಿಪಿ–1 ಚೆಕ್ಕನ್ನು ಕೊಟ್ಟಿದ್ದರೂ ಸ್ವಾಮಿಶೆಟ್ಟಿಗೆ ಕೊಟ್ಟಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.